ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ
ಸೋಮವಾರಪೇಟೆ
ಸಿ.ಸಿ. ನಂ. 827 /2022

| | | |
|---|---|---|
| ಹೆಸರು | : ಬಿ.ಆರ್.ಉಮೇಶ | ಡಿಡಬ್ಲ್ಯೂ-1 |
| ತಂದೆಯ ಹೆಸರು | : ಲೇಟ್ ಬಿ.ಕೆ.ರಾಮಪ್ಪ | |
| ವಯಸ್ಸು | : 64 ವರ್ಷ | |
| ವೃತ್ತಿ | : ಗುತ್ತಿಗೆ | |
| ವಾಸ ಸ್ಥಳ | : ಕುಶಾಲನಗರ | |

ದಿಃ 01.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಪ್ರಮಾಣೀಕೃತ ಹೇಳಿಕೆ ಃ-

1. ನನಗೆ ದೂರುದಾರರ 2010 ರಿಂದ ಪರಿಚಯ ಇರುತ್ತದೆ. ನಾನು ರಾಮ ಕಾಂಪ್ಲೆಕ್ಸ್ ನಲ್ಲಿ ದಿನಸಿ ಅಂಗಡಿಯನ್ನು 1997 ರಿಂದ 2006 ರವರೆಗೆ ನಡೆಸುತ್ತಿದ್ದೆ. ನಂತರ ದೂರುದಾರರು ಕಾಂಪ್ಲೆಕ್ಸ್ ಖರೀದಿ ಮಾಡುತ್ತಾರೆ ಎಂದು ನಾನು ಅಂಗಡಿಯನ್ನು ಮುಚ್ಚಿರುತ್ತೇನೆ. 2013 ರಲ್ಲಿ ಕುಶಾಲನಗರಕ್ಕೆ ಹೋಗಿ ಅಲ್ಲಿ ವಾಸವಾಗಿರುತ್ತೇನೆ. ನನಗೂ ಮತ್ತು ದೂರುದಾರರಿಗೆ 2013 ರಲ್ಲಿ 6 ಲಕ್ಷ ಹಣಕಾಸಿನ ವ್ಯವಹಾರ ಆಗಿತ್ತು. ನನಗೆ ನಗದು ಹಣ ನೀಡಿರುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ನಾನು ಎಸ್.ಬಿ.ಐ ಖಾತೆಯ ಸಹಿ ಮಾಡಿ ಖಾಲಿ ಚೆಕ್ ನಂ.014335 ಅನ್ನು ನೀಡಿರುತ್ತೇನೆ. ನಾನು ಸುಮಾರು 5-6 ಲಕ್ಷ ಬಡ್ಡಿ ಕೊಟ್ಟಿರುತ್ತೇನೆ. ನಂತರ ನಾನು ನನ್ನ ಮಗನ ಖಾತೆಯಿಂದ 1 ಲಕ್ಷ ಹಣವನ್ನು ಮತ್ತು 36 ಸಾವಿರ ಹಣವನ್ನು ಫಿರ್ಯಾದುದಾರರ ಖಾತೆಗೆ ಸಲ್ಲಿಸಿರುತ್ತೇನೆ. ಇದಲ್ಲದೇ ನಾನು 2 ಲಕ್ಷ ನಗದು ಹಣವನ್ನು ಅವರ ಮನೆಗೆ ಹೋಗಿ ನೀಡಿರುತ್ತೇನೆ. ನಾನು ಫಿರ್ಯಾದಿಗೆ 1,64,000/- ಮಾತ್ರ ಬಾಕಿ ಇರುತ್ತೇನೆ. 2013 ರ ನಂತರ ನಾನು ಯಾವುದೇ ಹಣವನ್ನು ಪಡೆದಿಲ್ಲ.

2. ದಿಃ18-08-2022 ರಂದು 6 ಲಕ್ಷ ದೂರುದಾರರಿಂದ ಸಾಲ ಪಡೆದಿರುತ್ತೇನೆ ಎಂದು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ದೂರುದಾರರು ಸದರಿ ಚೆಕ್ ಅನ್ನು ಬ್ಯಾಂಕ್ ನಲ್ಲಿ ಹಾಕಿದ್ದು ಸದರಿ ಚೆಕ್ಕು ಅಕೌಂಟ್ ಕ್ಲೋಸ್ ಎಂದು ಬಂದಿರುತ್ತದೆ ಎಂದರೆ ಸಾಕ್ಷಿಯು ಅಷ್ಟು ಹೊತ್ತಿಗೆ ಕುಶಾಲನಗರಕ್ಕೆ ಹೋಗಿ ವಾಸವಾಗಿರುತ್ತೇನೆ ಎಂದಿರುತ್ತಾರೆ. ನನಗೆ ಯಾವುದೇ ನೋಟಿಸು ತಲುಪಿಲ್ಲ. ಎಸ್.ಬಿ.ಐ ನ ಲೆಡ್ಜರ್ ಅನ್ನು ನಿಡಿ 1 ಎಂದು, ವಿಜಯ ಬ್ಯಾಂಕ್ ರಶೀದಿಯನ್ನು ನಿಡಿ 2 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನನ್ನು ಬಿಡುಗಡೆ ಮಾಡಬೇಕಾಗಿ ಮತ್ತು ದೂರುದಾರರ ಅರ್ಜಿಯನ್ನು ವಜಾ ಮಾಡಬೇಕಾಗಿ ಕೋರುತ್ತೇನೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-
ಪ್ರ.ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ
ಸೋಮವಾರಪೇಟೆ